ಮನೆಗೆ ಬಂದು ಹೇಳುತ್ತಿದ್ದಳು – ಹೊಲಕ್ಕೆ ಹೊರಟಿದ್ದೇವೆ, ಬಾ ಅಂತ. ಆಗ ನನಗೆ ಮೂವಿ ನೋಡುವ ಆಸೆಯಿದ್ದರೂ ಅಳುತ್ತ ತಾಯಿಯ ಹಿಂದೆ ಹೋಗ್ತಾ ಇದ್ದೆ. ನೀನು ನನಗೆ ಒಂದು ದಿನಾನು ಸುಮ್ನೆ ಇರೋಕೆ ಬಿಡಲ್ಲ, ನೀನು ಹಾಗೆ, ಹೀಗೆ ಅಂತ ಹೇಳಿ ಮುಂದೆ ಸುಮ್ನೆ ಆಗುತ್ತಿದ್ದೆ. ನಮ್ಮ ಜಮೀನು ಬರೀ 2 ಎಕರೆ ಇತ್ತು. ಅದು ಬರಗಾಲದ ಜಮೀನು. ಅಲ್ಲಿ ಏನೂ ಸರಿಯಾಗಿ ಬೆಳೆಯುವುದಕ್ಕೆ ಆಗುತ್ತಿರಲಿಲ್ಲ. ಅಂತಹ ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಾ ಇದ್ವಿ. ಆ ಜಮೀನಿನಿಂದ ನಮಗೆ ಎಂದೂ ಕೂಡ ಹಣ ಬಂದಿಲ್ಲ. ಬರೀ ಮಳೆ ಆಧಾರಿತ ಬೇಸಾಯವನ್ನೇ ಕಷ್ಟದಿಂದ ಮಾಡ್ತಾ ಇದ್ವಿ. ಹೀಗಿತ್ತು ನನ್ನ ಬಾಲ್ಯ. ಆದ್ರೆ ನನಗೂ ದೇವರ ದಯೆಯಿಂದ ಒಳ್ಳೆಯ ಟೀಚರ್ ಸಿಕ್ಕಿದ್ರು. ಮೊದಲು ತಳವಾರ್ ಸರ್ ಅಂತ ಇದ್ದರು. ಅವರು ಕಿತ್ತೂರಿನವರು. ಅವರು ನನಗೆ ತುಂಬ ಪ್ರೋತ್ಸಾಹ ಕೊಡುತ್ತಿದ್ದರು. ಅವರ ಫ್ಯಾಮಿಲಿ ಬೇರೆ ಕಡೆ ಇದ್ದುದರಿಂದ ನಾನು ರಾತ್ರಿ ಅವರ ಜೊತೆಯಲ್ಲೆ ಮಲಗುತ್ತಿದ್ದೆ. ಅವರ ಬಟ್ಟೆಗಳನ್ನು ತೊಳೆಯುತ್ತಿದ್ದೆ. ಅವರ ಮನೆಯ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದೆ. ನನ್ನ ಜೊತೆ ನನ್ನ ಮೂರು ಜನ ಸಹಪಾಠಿಗಳು ಕೂಡ ಇರ್ತಾ ಇದ್ರು. ಆದಾದ ಮೇಲೆ ಜಿ.ಜಿ.ಚೌಡಿ ಅಂತ ನನಗೆ ಗುರುಗಳು ಸಿಕ್ಕಿದರು. ದೇವರಂತಹ ಮನುಷ್ಯರು ಅವರು. ಆ ಶಿಕ್ಷಕರೆ ನನಗೆ ಜೀವನದಲ್ಲಿ ಏನಾದ್ರು ಮಾಡು ಎಂಬ ಛಲವನ್ನು ತುಂಬಿದ್ರು. ನಾನು ಎಷ್ಟೇ ಕೀಟಲೆ ಪ್ರಶ್ನೆಗಳನ್ನು ಕೇಳುತ್ತಿದ್ದರೂ ಯಾವತ್ತಿಗೂ ಯಾವುದಕ್ಕೂ ಬೇಸರಿಸಿಕೊಳ್ಳದೆ ನನ್ನೆಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ನನಗೆ ಇನ್ನಷ್ಟು ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಿದ್ದರು. ಅಕಸ್ಮಾತ್ ನಾನು ಕೆಲಸಕ್ಕೆ ಹೊಲಗಳಿಗೆ ಹೋದಾಗ ಚೌಡಿ ಸರ್ ನನ್ನನ್ನು ಅಲ್ಲಿಂದ ವಾಪಸ್ ಕರೆದುಕೊಂಡು ಬಂದು ಶಾಲೆಯಲ್ಲಿ ಕೂರಿಸುತ್ತಿದ್ದರು. ಅಷ್ಟೇ ಅಲ್ಲ, ಒಮ್ಮೆ ಯಾರದೋ ಗಲಾಟೆಯಾದಾಗ ಅದನ್ನು ಬಿಡಿಸಲು ಹೋಗಿ ನನ್ನ ತಲೆಗೆ ಕಲ್ಲು ಏಟು ಬಿದ್ದಿತ್ತು. ಆಗ 18 ಹೊಲಿಗೆಗಳನ್ನು ಹಾಕಿಸಿ ತನ್ನ ಮನೆಯಲ್ಲಿ ಇಟ್ಟುಕೊಂಡು ಸ್ವಂತ ಮಗನಂತೆ ನೋಡಿಕೊಂಡಿದ್ದರು ನನ್ನ ಚೌಡಿ ಸರ್. ಇದು ನಡೆದಿದ್ದು ನಾನು 7ನೇ ತರಗತಿಯಲ್ಲಿದ್ದಾಗ. 7ನೇ ತರಗತಿಯ ರಿಸಲ್ಟ್ ಬಂದಾಗ ನಾನು ಪುತ್ತೂರು, ಗೋವಾದಲ್ಲಿ ಕಟ್ಟಡಗಳ ನಿರ್ಮಾಣದ ಜಾಗದಲ್ಲಿ ಸಿಮೆಂಟ್ ಹೊರುವ ಕೆಲಸಕ್ಕೆ ಸೇರಿದ್ದೆ. 12 ನೆ ವರ್ಷದಲ್ಲೆ 50 ಕೆ.ಜಿ. ಸಿಮೆಂಟ್ ಚೀಲವನ್ನು ಒಬ್ಬನೇ ಹೊರ್ತಾ ಇದ್ದೆ. ಅಷ್ಟೇ ಅಲ್ಲ, ಮಂಗಳೂರು ಪುತ್ತೂರು ಕಡೆಗಳಲ್ಲಿ ಸೈಜ್‌ಗಲ್ ಅಂತ ಬರ್ತಾವೆ. ನಾನು ಅದನ್ನು ಒಂದೊಂದೇ ಹೊರ್ತಾ ಇದ್ರೆ ಲೇಟ್ ಆಗುತ್ತೆ ಅಂತ ಹೇಳಿ ಎರಡೆರಡು ಹೊರ್ತಾ ಇದ್ದೆ. ಆ ಸಂದರ್ಭದಲ್ಲಿ ಅವರೇ ಟಿ.ಸಿ. ತೆಗೆದುಕೊಂಡು ಬಂದು ಹೈಸ್ಕೂಲ್‌ಗೆ ನನ್ನನ್ನು ಸೇರಿಸಿದರು. ಹೈಸ್ಕೂಲ್‌ಗೆಂದು ನಾನು ನನ್ನ ತಾಯಿಯ ಸೊರಟೂರಿಗೆ ಬಂದೆ. ನನಗೆ ಕಾಲರಾ ಬಂದು ಬಹಳ ಸಮಸ್ಯೆಯನ್ನು ಅನುಭವಿಸಿದ ಮೇಲೆ 9ನೆ ತರಗತಿಗೆ ಮತ್ತೆ ನೀಲಗುಂದದ ಪಕ್ಕದಲ್ಲಿರುವ ಮುಳುಗುಂದಕ್ಕೆ ಬಂದು ಸೇರಿದೆ. ಪ್ರತಿನಿತ್ಯ ನೀಲಗುಂದದಿಂದ ಮುಳುಗುಂದಕ್ಕೆ ನಡೆದುಕೊಂಡು ಹೋಗಿ ಬರುತ್ತಿದ್ದೆ. ಮತ್ತೆ ನನಗೆ ಅಲ್ಲಿ ಒಳ್ಳೆಯ ಶಿಕ್ಷಕರು ಸಿಕ್ಕರು. ಎಸ್. ಚಂದ್ರಶೇಖರ್ ಅಂತ. ಕೊನೆಗೆ ನಾನು ಅವರ ಮನೆಯಲ್ಲಿಯೇ ಇದ್ದೆ. ಇವರ ಜೊತೆಗೆ ಆರ್.ಆರ್.ಪಟ್ಟಣ್ ಅಂತ ಇನ್ನೊಬ್ಬರು ಶಿಕ್ಷಕರು ಸಿಕ್ಕರು. ಇವರೆಲ್ಲ ನನಗೆ ಎಲ್ಲದರಲ್ಲೂ ಪ್ರೋತ್ಸಾಹಿಸುತ್ತಿದ್ದರು, ಪ್ರೇರೇಪಿಸುತ್ತಿದ್ದರು. ಅವರದ್ದು ಒಂದೇ ಒಂದು ಕಂಡೀಷನ್ ಏನಪ್ಪ ಅಂದ್ರೆ, 'ಏನೇ ಕಷ್ಟ ಬಂದ್ರು, ಅಟೆಂಡೆನ್ಸ್ ಇರಲಿ ಬಿಡಲಿ, ಏನೇ ಆದ್ರು ಓದುವುದನ್ನು ನಿಲ್ಲಿಸಬೇಡ' ಎಂಬುದಾಗಿತ್ತು. ಇವರ ಬೆಂಬಲದಿಂದಲೇ ಹತ್ತನೇ ತರಗತಿಯನ್ನು ಮುಗಿಸಿದೆ. ಎಸ್‌ಎಸ್‌ಎಲ್‌ಸಿಯವರೆಗೂ ಕೂಡ ಯಾವುದೇ ರಜಾ ದಿನ, (ಪಂಚಮಿ ಎರಡು ದಿನ ಬಿಟ್ಟರೆ) ಮೋಜು ಮಾಡ್ತಾ ಇರಲಿಲ್ಲ. ಆ ದಿನಗಳಂದು ನಾನು ಬೇರೆ ಬೇರೆ ಜಾಗಗಳಲ್ಲಿ ಕೆಲಸ ಮಾಡಿ ದುಡಿದದ್ದೆ ಜಾಸ್ತಿ. ನನ್ನ ತಂದೆ-ತಾಯಿಗೆ ಚಿಕ್ಕಂದಿನಿಂದಲೂ ಪ್ರೀತಿಪಾತ್ರನಾಗಿದ್ದೆ. ಹಾಗಾಗಿ ಅವರು ನನ್ನ ಹುಟ್ಟುಹಬ್ಬವನ್ನು ಗೋಧಿ ಹಿಟ್ಟಿಗೆ ಬೆಲ್ಲ ಹಾಕಿಬಿಟ್ಟು ಅದನ್ನೇ ಕೇಕ್ ಅಂತ ಮಾಡಿ ಅಕ್ಕಪಕ್ಕದ ಮನೆಯ ಹುಡುಗರನ್ನೆಲ್ಲ ಕರೆದು ಅದನ್ನೆ ಕಟ್ ಮಾಡಿಸಿ ಎಲ್ಲರಿಗೂ ಹಂಚಿಸುತ್ತಿದ್ದಳು. ಅದೇ ನನ್ನ ಸೆಲೆಬ್ರೇಷನ್. ಅದು ಬಿಟ್ರೆ ನಾನು ಯಾವ ಹಬ್ಬ ಹರಿದಿನಗಳನ್ನೂ ನೋಡಲಿಲ್ಲ. ಆದ್ರೆ ನನಗೆ ಇನ್ನೊಂದು ಇನ್ಸ್‌ಪಿರೇಷನ್ ಅಂದ್ರೆ ನಾನು ಹುಟ್ಟಿದ್ದು ಚಂದ್ರಶೇಖರ್ ಆಜಾದ್ ಹುಟ್ಟಿದ ದಿನದಂದು. ಹಾಗಾಗಿ ನಾನು ಯಾವಾಗಲೂ ನನ್ನಲ್ಲಿ ಏನೋ ಇದೆ. ನಾನು ಕೂಡ ಆಜಾದ್ ತರ ಏನಾದ್ರೂ ಸಾಧಿಸ್ತೀನಿ ಅಂತ ಯೋಚಿಸ್ತಿದ್ದೆ. ಇಂದಿಗೂ ನನ್ನಲ್ಲಿ ಅದು ಕಮ್ಮಿಯಾಗಿಲ್ಲ. ಇದು ಕೂಡ ನನ್ನ ಜೀವನದ ಮತ್ತೊಂದು ಪ್ರೇರಣೆ.

ಒಂದು ದೇಶದಲ್ಲಿ ಎಲ್ಲದರಲ್ಲಿಯೂ ಹಿಂದುಳಿದ ಒಂದು ಕುಟುಂಬ ಯಾವ ಯಾವ ಕಷ್ಟಗಳನ್ನು ಅನುಭವಿಸುತ್ತದೆಯೋ ಆ ಎಲ್ಲಾ ಕಷ್ಟಗಳನ್ನು ನಾನು ಅನುಭವಿಸಿದ್ದೇನೆ. ಆ ಕಷ್ಟ ಎಷ್ಟಿತ್ತೆಂದರೆ ಒಬ್ಬ ಹೆಸರಿಲ್ಲದ ವ್ಯಕ್ತಿ ತನ್ನನ್ನು ಹೇಗೆ ಗುರುತಿಸಿಕೊಳ್ಳಲು ಸಾಧ್ಯವಿಲ್ಲವೋ ಹಾಗೆ ನಾನು ಒಬ್ಬಂಟಿಗನಾಗಿ ಎಲ್ಲಾ ತರಹದ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದ್ದೇನೆ. ಅಂತಹ ಬಡತನವಿತ್ತು. ನಾನು ಯಾವತ್ತೂ ಹೀಗಾಗಲೇ ಬೇಕು ಅಂತ ಕನಸು ಕಂಡವನಲ್ಲ. 4ನೇ ತರಗತಿಯಲ್ಲಿದ್ದಾಗ ಐ.ಪಿ.ಎಸ್. ಕೆಂಪಯ್ಯ ಅಂತ ಮನೆಯ ಮುಂದೆ ಬೋರ್ಡ್ ಹಾಕಿದೆ. ಆದಾದ ನಂತರ ಕಂಡಕ್ಟರ್ ಆಗಬೇಕು ಎನ್ನುವ ಆಸೆ ಬಂತು. ಹೀಗೆ ಆ ಕಷ್ಟದ ದಿನಗಳು ನನ್ನ ಆಸೆಗಳನ್ನು ಕೂಡ ಬದಲಿಸುತ್ತಾ ಹೋಯಿತು. 10ನೇ ತರಗತಿ ಆದ ಮೇಲೆ ತುಂಬಾ ಸಮಸ್ಯೆ ಇದ್ದುದರಿಂದ ಕಂಡಕ್ಟರ್ ಆಗಿಬಿಡೋಣ ಅನ್ನಿಸಿತು. ಏಕೆಂದರೆ 10ನೇ ತರಗತಿ ಮುಗಿದ ಮೇಲೆ ಸಿಗುವ ಕೆಲಸ ಕಂಡಕ್ಟರ್ ಕೆಲಸವಾಗಿತ್ತು. ಆಗ, ಆಮೇಲೆ ಡಿ.ಎಡ್. ಮಾಡಿ ಟೀಚರ್ ಆಗಿಬಿಡೋಣ ಅಂತೆಲ್ಲ ಬೇರೆ ಬೇರೆ ತರಹದ ಆಲೋಚನೆಗಳು ಬರ್ತಾ ಇದ್ವು. ಕಾಲೇಜಿನ ದಿನಗಳಲ್ಲಿ ರಾಮಕೃಷ್ಣ ಆಶ್ರಮದ ನಿರ್ಭಯಾನಂದ ಸ್ವಾಮೀಜಿಗಳ ಪರಿಚಯದ ನಂತರ ನನ್ನ ಬದುಕಿಗೆ ಒಂದು ಗುರಿ ಸಿಕ್ಕಿತು. ನಾನು ಅವರ ಜೊತೆ ಆಗಾಗ ಚರ್ಚೆ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದೆ. ನಾನು ಐ.ಪಿ.ಎಸ್. ಆಗಬೇಕೆಂಬ ಆಸೆ ಹುಟ್ಟಿದ್ದು 2ನೇ ಪಿ.ಯು.ಸಿ.ಯಲ್ಲಿ. ನಿರ್ಭಯಾನಂದ ಸ್ವಾಮೀಜಿಗಳ ಪರಿಚಯವಾದ ನಂತರದ ಅವರ-ನನ್ನ ಸ್ನೇಹ ಎಷ್ಟರಮಟ್ಟಿಗೆ ಇತ್ತೆಂದರೆ ನಾನು ಬಿಟ್ಟರೂ ಅವರು ನನ್ನನ್ನು ಬಿಡುತ್ತಿರಲಿಲ್ಲ. ಅವರು ನನ್ನನ್ನು ಆಶ್ರಮಕ್ಕೆ ಕರೆದುಕೊಂಡು ಹೋಗಿ ಹಾಡನ್ನು, ಪ್ರವಚನವನ್ನು ಕೇಳಿಸುತ್ತಿದ್ದರು. ಜೀವನದ ಎಲ್ಲಾ ಅಂಶಗಳನ್ನೂ ತಿಳಿಸುತ್ತಿದ್ದರು ಮತ್ತು ಐ.ಎ.ಎಸ್., ಐ.ಪಿ.ಎಸ್. ಮಾಡುವ ಎಲ್ಲಾ ತಾಕತ್ತುಗಳು ನಿನ್ನಲ್ಲಿ ಇದೆ ಎಂದು ಹುರಿದುಂಬಿಸುತ್ತಿದ್ದರು. ಇದು ನನ್ನ ಕನಸಿಗೆ ನೀರೆರೆದಂತಾಯಿತು. ಇವರ ಜೊತೆ ನನಗೆ ತುಂಬ ಸಹಾಯ ಮಾಡಿದವರು ಸುಭಾಷ್ ಸಾಸ್ವೆಹಳ್ಳಿ ಅಂತ. ನಾನು ಬಿ.ಎ. ದ್ವಿತೀಯ ವರ್ಷದಲ್ಲಿದ್ದಾಗ ಇವರ ಹತ್ತಿರ ಹೋಗಿ ಇನ್ನು ಎರಡು ವರ್ಷದಲ್ಲಿ ಐ.ಎ.ಎಸ್. ಆಗ್ತೀನಿ, ನನಗೆ ಓದಲು ಸಹಾಯ ಮಾಡಿ ಅಂತ ಕೇಳಿದಾಗ ಏನೂ ಮಾತನಾಡದೆ 'ಹೋಗಿ ಬ್ಯಾಂಕ್‌ನಲ್ಲಿ ಅಕೌಂಟ್ ಓಪನ್ ಮಾಡಿಸು, ದುಡ್ಡು ಹಾಕ್ತಿನಿ' ಅಂತ ಹೇಳಿದ ಮಹಾನುಭಾವ. ಇವರಿಂದ ನಾನು ಸುಮಾರು 64, 65 ಸಾವಿರ ತೆಗೆದುಕೊಂಡಿರಬಹುದು. ನಾನು ಐ.ಪಿ.ಎಸ್. ಆಗುವವರೆಗೂ ನನಗೆ ಸಹಾಯ ಮಾಡಿದವರು ಅವರು. ಇವರ ಪರಿಚಯ ನನಗೆ

**ನನ್ನ ಆದ್ಯತೆ ಹಳ್ಳಿ. ಕಳ್ಳರನ್ನು ಮಟ್ಟಹಾಕುವುದು, ಅಕ್ರಮ ಚಟುವಟಿಕೆಗಳನ್ನು ಬಂದ್ ಮಾಡುವುದು. ನನಗೆ ಮನೆ, ಹೆಂಡತಿ, ಮಕ್ಕಳು, ಊಟ, ನಿದ್ದೆ ಸೆಕೆಂಡ್ ಪ್ರಿಯಾರಿಟಿ.**